quickmarketreports.com

Date : 30-10-2015

# ಉತ್ತರ ಭಾರತದಿಂದ ಹೊಸ ಬೇಡಿಕೆಯ ನಿರೀಕ್ಷೆಯಿಂದ ತೆಂಗಿನೆಣ್ಣೆ ದರ ಗಳಿಕೆಯ ನಿರೀಕ್ಷೆ

ಹಿಂದಿನ ಕೆಲವು ವಾರಗಳಿಂದ ಇಳಿಕೆಯಲ್ಲಿದ್ದ ತೆಂಗಿಣ್ಣೆದರ ದೀಪಾವಳಿ ಹಬ್ಬದ ಸಲುವಾಗಿ ಉತ್ತರ ಭಾರತದಿಂದ ಹೊಸ ಬೇಡಿಕೆಯ ನಿರೀಕ್ಷೆಯಿಂದ ಸ್ವಲ್ಪ ಮಟ್ಟದ ಗಳಿಕೆ ಕಂಡಿದೆ. ಉತ್ಪಾದನಾ ಕೇಂದ್ರಗಳಿಂದ ಆವಕ ಉತ್ತಮವಾಗಿದ್ದರೂ, ದೇಶೀ ಮತ್ತು ಕಾರ್ಪೊರೇಟ್ ವಲಯದ ಬೇಡಿಕೆ ಮಂದಗತಿಯಲ್ಲಿದೆಯೆನ್ನಲಾಗಿದೆ. ತಮಿಳುನಾಡು ಮತ್ತು ಕೇರಳಗಳಲ್ಲಿ ಈಗ ದರ ಸ್ಥಿರವಿದ್ದು, ಮುಂದೆ ಹಬ್ಬಗಳಿಗೆ ಹಾಗೂ ಮುಂದಿನ ತಿಂಗಳ ಮಧ್ಯದಿಂದ ಶಬರಿಮಲೆ ಸೀಜನ್ ಪ್ರಾರಂಭವಾಗುವುದರಿಂದ ಬೇಡಿಕೆ ಹೆಚ್ಚಳದ ನಿರೀಕ್ಷೆಯಿರುವುದರಿಂದ ದರ ತುಂಬಾ ಹೆಚ್ಚಳವಾಗುವ ನಿರೀಕ್ಷೆಯಿಲ್ಲವಾದರೂ, ಈಗಿರುವುದಕ್ಕಿಂತ ಸಾಮಾನ್ಯ ಹೆಚ್ಚಳದ ಸಾಧ್ಯತೆಯನ್ನು ನಿರೀಕ್ಷಿಸುತ್ತಿದ್ದಾರೆ.